22	Construction of compound wall at Balanja DKZP higher Pry.School	0.50
23	Improvements at Bangerakatte Raktheswari padavu road at Paranki village	0.50
24	Construction of foot bridge at konda Shala at Savya village	0.50
25	Improvements to Honatta Ninnikallu Road at pilya village.	1.00

1015(438) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) : ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೀದರ್ ಜಿಲ್ಲೆಯ ಭಾಲ್ಕಿ ಪಟ್ಟಣದಲ್ಲಿ ಐ.ಡಿ.ಎಸ್.ಎಂ.ಟಿ. ಯೋಜನೆಯಡಿಯಲ್ಲಿ 2 ಕೋಟಿ ಹಣ ಮಂಜೂರಾಗಿದ್ದು, ಇಲ್ಲಿಯವರೆಗೆ ಎಷ್ಟು ಕಾಮಗಾರಿಗಳನ್ನು ಮಾಡಲಾಗಿದೆ?

ಆ) ಯಾವ ಯಾವ ಕಾಮಗಾರಿಗಳನ್ನು ಇನ್ನೂ ಪೂರ್ತಿ ಮಾಡಬೇಕಾಗಿದೆ?

ಇ) ಬಾಕಿ ಇರುವ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎಸ್.ಆರ್.ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು): ಅ) ಐ.ಡಿ.ಎಸ್.ಎಂ.ಟಿ ಯೋಜನೆಯಡಿ ಭಾಲ್ಕಿ ಪಟ್ಟಣಕ್ಕೆ ರೂ.194.25 ಲಕ್ಷಗಳ ಯೋಜನಾವರದಿ ಮಂಜೂರಾಗಿದ್ದು ಪ್ರಥಮವಾಗಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

1. ಬೀದಿ ದೀಪಗಳು
2. ಪೊಲೀಸ್ ಸ್ಟೇಷನ್ ರಸ್ತೆಯಿಂದ ಬೀರದೇವರ ದೇವಸ್ಥಾನದವರೆಗೆ ರಸ್ತೆ ಕಾಮಗಾರಿ
3. ಪೋರ್ಟ್ ರಸ್ತೆಯಿಂದ ಮೊಮ್ಮಗೊಂಡೇಶ್ವರ ಸರ್ಕಲ್‌ವರೆಗಿನ ರಸ್ತೆ ಕಾಮಗಾರಿ.

ಆ) ಮಂಜೂರಾದ ಕಾಮಗಾರಿಗಳಲ್ಲಿ ಈ ಕೆಳಕಂಡ 3 ಕಾಮಗಾರಿಗಳನ್ನು ಪೂರ್ಣಗೊಳಿಸಬೇಕಾಗಿರುತ್ತದೆ.

1. ಪುರಸಭಾ ಆವರಣದಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಾಣ,
2. ಹಣ್ಣು ಮತ್ತು ತರಕಾರಿ ಮಾರುಕಟ್ಟೆ
3. ಹಣ್ಣು ಮತ್ತು ತರಕಾರಿ ಶೀತಲ ಸಂರಕ್ಷಣಾ ಘಟಕ

ಇ) ಐ.ಡಿ.ಎಸ್.ಎಂ.ಟಿ ಮಾರ್ಗಸೂಚಿಯಡಿ ವಿಧಿಸಿರುವ ಕಾಲಮಿತಿಯೊಳಗೆ ಈ ಕಾಮಗಾರಿಗಳನ್ನು ಪೂರ್ಣ ಗೊಳಿಸಲಾಗುವುದು.

1016(845) ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ) : ಮಾನ್ಯ ಪೌರಾಡಳಿತ ಮತ್ತು ಕೆಯುಐಡಿಎಫ್‌ಸಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೀದರ್ ಜಿಲ್ಲೆಯ ಭಾಲ್ಕಿ ಪುರಸಭೆಯಲ್ಲಿ 11ನೇ ಆರ್ಥಿಕ Finance ಯೋಜನೆಯಡಿಯಲ್ಲಿ ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ.